ಉರಿಯೆದ್ದು ಕುಣಿವ ಬೇಸಿಗೆಯ ಎದುರು ವಿಶಾಲವಾಗಿ ಹರಡಿದ್ದ ಬುದ್ಧನಷ್ಟು ಪ್ರಶಾಂತ ಮರದ ಕೆಳಗೆ ಇರುವಷ್ಟು ತಣ್ಣನೆಯ ತಾಯ್ತನವನ್ನು ಅನುಭವಿಸುವ ಸುಖಕ್ಕೆ ಯಾವ ಎಣೆಯೂ ಇಲ್ಲ. ನೆಲಕ್ಕೆ ಬಾಗಿದ ಕೊಂಬೆಗಳು, ಯಾವುದೊ ಎಲೆ ಮರೆಯಲ್ಲಿ ಕೂತ ಹಕ್ಕಿಗಳ ಕಲರವ, ಮರದ ಕೆಳಗೆ ಆಡುವ, ನಿದ್ದೆ ಮಾಡುವ ಮಕ್ಕಳು, ಮುದುಕರು... ಮಾವಿಗೆ ಮಾನವರ ನೋವು ನುಂಗುವ ನೀಲಕಂಠನ ಗುಣವಿದೆ ಎನ್ನಿಸಿದ್ದಿದೆ. ಮಾವು ಚಿಗುರುವುದು ಮಾಗಿಯಲ್ಲಿ. ವಸಂತಕ್ಕೆ ಬರುವ ವೇಳೆಗೆ ಉಗಾದಿ ಸಂಭ್ರಮಕ್ಕೆ ತೋರಣ ಕಟ್ಟುವಷ್ಟು ಎಲೆ ಬಲಿಯುತ್ತವೆ. ಭಾರತದ ಹಬ್ಬ ಹಬ್ಬಗಳಿಗೂ ಮಾವಿನ ತೋರಣ ಬೇಕು. ಕಳಸದ ಮುಡಿಗೂ ಬೇಕು. ಸಳ ಸಳನೆ ಬಳುಕುವ ಕಂದು ಬಣ್ಣದ ಮನೋಹರ ಚಿಗುರು ಅಶ್ವತ್ಥದಂತೆಯೆ ಮೋಹಕ. ಇಷ್ಟು ಗೊತ್ತಿಲ್ಲದ, ರೈತಾಪಿಗಳಲ್ಲದ ಕವಿಗಳು ಚೈತ್ರದ ಚಿಗುರು ಎಂದೆಲ್ಲ ಬರೆದಿದ್ದಾರೆ. ಸಣ್ಣವರಿದ್ದಾಗ ಎಲೆ ಹಿಸುಕಿ ನೋಡಿ ಮರದ ಜಾತಿ ಯಾವುದು ಎಂದು ಹೇಳುವಷ್ಟು ಅನುಭವಸ್ಥರಾಗಿದ್ದೆವು. ಆ ನಂತರ ಎಲೆ ನೋಡಿಯೆ ಗಿಡದ ಜಾತಿ ಹೇಳುವಷ್ಟು ಪರಿಣತರಾದೆವು. ಎಳೆ ಚಿಗುರಿನ ವಾಸನೆಗೆ ಕೂಡ ಮೋಹಕ ವಾಸನೆಯಿರುತ್ತದೆ. ಮಾವು ಮಲ್ಲಿಗೆ, ಮೊದಲ ಮಳೆ ಬಿದ್ದ ಮಣ್ಣು, ಮಿಂದು ಮಲಗಿದ ಕೂಸಿನ ವಾಸನೆ ಕಂಡವರಿಗೆ ಆಧುನಿಕ ಸೆಂಟುಗಳು ಬುರ್ನಾಸು ಎನ್ನಿಸುತ್ತವೆ.

ಯುಗಾದಿಯ ನಂತರ ತೋಟ/ ತೋಪುಗಳ ಕಾವಲು ಶುರುವಾಗುತ್ತಿತ್ತು. ಶಿವರಾತ್ರಿಗೆ ಸೀಡುಗಾಯಿ (ಹಾಲು ಬಿಡುವ ಕಾಯಿ) ಉಗಾದಿಗೆ ಊರುಗಾಯಿ (ಉಪ್ಪಿನ ಕಾಯಿ ಹಾಕಬಹುದಾದ ಕಾಯಿ) ಎಂಬ ಗಾದೆ ಇದೆ. ಮಾವಿನ ತೋಟ/ ತೋಪುಗಳನ್ನು ಕಾಯುವವರು ನಮ್ಮ ಕಣ್ಣಿಗೆ ಕಿನ್ನರ, ಗಂಧರ್ವರಂತೆ ಕಾಣಿಸುತ್ತಿದ್ದರು. ತೋಟದೊಳಗೆ ಎಲ್ಲ ಕಡೆ ಸರಿಯಾಗಿ ಕಾಣಿಸುವ ಜಾಗ ನೋಡಿ ಗುಡಿಸಲು ಹಾಕುತ್ತಿದ್ದರು. ಅಲ್ಲೆ ಅಡುಗೆ ಮಾಡುತ್ತಿದ್ದರು. ಕೆಲವೊಮ್ಮೆ ಮೂರು ನಾಲ್ಕು ತೋಟಗಳನ್ನು ಕಾಯುವವರೆಲ್ಲ ಸೇರಿಕೊಂಡು ನಾಟಕ ಕಲಿಯುತ್ತಿದ್ದರು. ಮೊಲ, ಹಂದಿಗಳಿಗೆ ಉರ್ಲು, ಬಲೆ ಕಟ್ಟಿ ಹಿಡಿದು ಬಡಿದು ತಿನ್ನುತ್ತಿದ್ದರು. ಮೂರ್ನಾಲ್ಕು ತಿಂಗಳು ಇವರ ಸಂಭ್ರಮಕ್ಕೆ ಪಾರವೆ ಇರಲಿಲ್ಲ ಎಂದು ಭಾವಿಸುತ್ತಿದ್ದೆವು. ಆದರೆ, ಅವರನ್ನು ಕೇಳಿದರೆ ಮಾತ್ರ 'ಹೋಗೊ ಹೋಗೊ ಹುಡುಗ ಇಂಥ ಕಷ್ಟ ಯಾವನ್ಗೂ ಬ್ಯಾಡ, ಬಡ್ಡಿ ಮಗನವು ರಾತ್ರಿ ಆದ್ರೆ ಹಂದಿ ಹಿಂಡಿಂಡೆ ನುಗ್ತವೆ. ಯಾವ ಬೋಳಿಮಗ ಹೋಗಿ ಅವುಗಳನ್ನು ಎದುರಿಸ್ತಾನೆ. ಕೂಗಿದ್ರೂ ಇಲ್ಲ. ಪಟಾಕಿ ಹಚ್ಚಿದ್ರೂ ಇಲ್ಲ. ದೆವ್ವಗಳು ಬ್ಯಾರೆ ಓಡಾಡ್ತವೆ. ಏನೊ ಬಿತ್ತನೆಗೆ, ಮಕ್ಕಳ ಇಸ್ಕೂಲಿಗೆ ನಾಲಕ್ ಕಾಸು ಹುಟ್ಟವೆ ಅಂತ ಕಾಯ್ತಿದ್ದೀವಿ. ಊರ್ ಗಂಡುಸ್ರೆಲ್ಲ ಅವರವರ ಹೆಂಡ್ರ ಪಕ್ಕ ಮಲಗಿದ್ರೆ ನಾವ್ ಮಾತ್ರ ದೆವ್ವಗಳ ಜೊತೆ' ಎಂದು ಶಾಪ ಹಾಕುತ್ತಿದ್ದರು. ಅವರು ಸುಳ್ಳು ಹೇಳುತ್ತಿದ್ದರೆಂಬ ಅನುಮಾನ ನನಗೆ ಈಗಲೂ ಇದೆ. ಹೆಂಡತಿ, ಮಕ್ಕಳ ಕಾಟ ತಪ್ಪಿದ್ರೆ ಸಾಕೆಂಬಂತೆ ತಲೆ ತಪ್ಪಿಸಿಕೊಂಡು ಓಡಾಡ್ತಿದ್ದ ಇವ್ರು ತ್ವಾಟಕ್ಕೆ ಬಂದ್ ಕೂಡ್ಲೆ ಮಹಾ ಸಂಸಾರಸ್ಥರ ಥರ ನೆನಸ್ತಾವ್ರಲ್ಲ ಅನ್ನಿಸ್ತಿತ್ತು. ಈ ಕಾಯುವವರೇನು ಸಾಬಸ್ತರಲ್ಲ. ಕಾಯಿ ಬಲಿತವೆಂದರೆ ಅಲ್ಲಿ ಕಾಯಿಗಳಿದ್ದವೆಂಬ ಗುರುತೂ ಇಲ್ಲದಂತೆ ತೊಟ್ಟು ಸಮೇತ ಮುರಿದು ಮಾಯ ಮಾಡುತ್ತಿದ್ದರು. ಮೂಟೆಗಳು ಹೆಂಡದಂಗಡಿ ಸೇರಿದಂತೆ ನಾನಾ ದಿಕ್ಕಿಗೆ ಹಾರಿ ಹೋಗುತ್ತಿದ್ದವು. ಅನೇಕ ಸಾರಿ ಕೆಲವರು ತಮ್ಮ ತಮ್ಮ ಪ್ರಿಯತಮೆಯರನ್ನು ಖುಷಿ ಪಡಿಸುವ ಖರ್ಚುಗಳನ್ನೂ ಇದರಲ್ಲೆ ಹುಟ್ಟಿಸುತ್ತಿದ್ದರು. ಮಾವು ಯಾರ್‍ಯಾರಿಗೊ ಆಗುತ್ತಿದ್ದಳು.

ಮಾವನ್ನು ಮಲೆನಾಡಿಗರು ಬಳಸಿದಷ್ಟು ವೈವಿಧ್ಯ ರೂಪ ನಮ್ಮಲ್ಲಿಲ್ಲ. ನಮ್ಮಲ್ಲಿ ಇರುವುದೆಲ್ಲವೂ ತಿನ್ನುವುದಕ್ಕೆ ಮುಗಿದು ಹೋಗುತ್ತವೆ. ಜೊತೆಗೆ ಕಮರ್ಷಿಯಲ್ ತಳಿಗಳೆ ಹೆಚ್ಚು. ಮಲೆನಾಡಿನ ನಾಟಿ ಮಾವಿನ ಮರಗಳ ಹಣ್ಣುಗಳು ಸೀಕರಣೆಯಿಂದ ಹಿಡಿದು ಅವುಗಳ ರಸ ಹಿಂಡಿ ಒಣಗಿಸಿ ಮಾಡುವ ಮಾಂಬಳ, ಮಾವಿನ ಗೊಜ್ಜು, ಥರಾವರಿ ಅಡುಗೆಗಳವರೆಗೆ. ಉಪ್ಪಿನ ಕಾಯಿಗೆ ಬಳಸುವ ಅಪ್ಪೆ ಮಿಡಿ ಮಾವಿನ ಮರಗಳಿಗಂತೂ ಇನ್ನಿಲ್ಲದ ಬೇಡಿಕೆ. ಒಮ್ಮೆ ಶಿವಮೊಗ್ಗದಿಂದ ಶಿಕಾರಿಪುರದ ಮೂಲಕ ಹಾವೇರಿಗೆ ಹೋಗುವುದಿತ್ತು. ಶಿಕಾರಿಪುರದ ಮೇಲೆ ಹಾದು ಹೋಗುವ ರಸ್ತೆ ವಿಸ್ತಾರವಾಗುವ ಶಾಪಕ್ಕೆ ಗುರಿಯಾಗಿತ್ತು. ರಸ್ತೆ ಉದ್ದಕ್ಕೂ ಮುಗಿಲೆನ್ನೆತ್ತರ ನಿಂತ ಅಪ್ಪೆ ಮಿಡಿ ಮರಗಳನ್ನು ಕತ್ತರಿಸಿ ತುಂಡು ತುಂಡು ಮಾಡಿ ಹಾಕಿದ್ದರು. ಥೇಟ್ ಕುರುಕ್ಷೇತ್ರ